

ಹೋಯಿತು. ಅಣೆಕಟ್ಟುಗಳ ಭಾರದಿಂದ ಕನ್ನಡ ನಾಡಿನ ಭಾಗೀರಥಿ ಬಾಗಿತು. ಅತ್ತ ಹೊನ್ನಾವರದಲ್ಲಿ ಶರಾವತಿ ಅಳಿವೆಯಲ್ಲಿ ನೀರಿನ ರಭಸ ಕಡಿಮೆಯಾಯಿತು. ಶರಾವತಿ ನದಿಗೆ ಯಾವುದೇ ಅಣೆಕಟ್ಟು ಇಲ್ಲದಿದ್ದಾಗ, ಶರಾವತಿ ನದಿ ರಭಸದಿಂದ ಹರಿದು ಸಮುದ್ರದಲ್ಲಿ ಕಿಲೋ ಮೀಟರ್‌ವರೆಗೂ ಸಿಹಿನೀರನ್ನು ಮತ್ತು ಪೋಷಕಾಂಶಗಳನ್ನು ತಳ್ಳುತ್ತಿತ್ತು. ಹಲವು ಅಣೆಕಟ್ಟುಗಳ ಕಾರಣಕ್ಕೆ ಉಪ್ಪು ನೀರು


ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನಾ ಪ್ರದೇಶ

ಹಿಮ್ಮುಖವಾಗಿ ಹರಿಯತೊಡಗಿತು. ಕೆಪಿಸಿಎಲ್‌ನ ಅಗತ್ಯಗಳಿಗಾಗಿ 2002ರಲ್ಲಿ ಗೇರುಸೊಪ್ಪ ಅಣೆಕಟ್ಟು ನಿರ್ಮಾಣಗೊಂಡು 240 ಮೆ.ವ್ಯಾ ವಿದ್ಯುತ್ ಉತ್ಪಾದನೆ ಪ್ರಾರಂಭಿಸಿತು. ವಿದ್ಯುತ್ ದಾಹ ಮುಗಿಯಿತೇ? ಇಲ್ಲ.

ಇದಿಷ್ಟು ಶರಾವತಿ ನದಿ ಹಾಗೂ ಅಣೆಕಟ್ಟಿನ ಸ್ಥೂಲ ಇತಿಹಾಸ.

## ಶರಾವತಿ ಪಂಪ್ಡ್ ಸ್ಟೋರೇಜ್: ಏನಿದು?

ಗುಣಮಟ್ಟದ ವಿದ್ಯುಚ್ಛಕ್ತಿಯನ್ನು ರಾಜ್ಯದ ಜನತೆಗೆ ಪೂರೈಸಲು 'ಶರಾವತಿ ಪಂಪ್ಡ್ ಸ್ಟೋರೇಜ್' ಎಂಬ ಯೋಜನೆ ಜಾರಿಗೆ ಕರ್ನಾಟಕ ವಿದ್ಯುತ್ ನಿಗಮ 2017ರಲ್ಲಿ ಯೋಜನಾ ಪೂರ್ವ ವರದಿ ತಯಾರಿಸಿತು. ಈ ಯೋಜನೆಗಾಗಿ ಶರಾವತಿ ಸಿಂಗಳೀಕ ಅಭಯಾರಣ್ಯ ಕೇಂದ್ರ ಭಾಗದಲ್ಲಿ ಸುಮಾರು 354 ಎಕರೆ ಪ್ರದೇಶವನ್ನು ಬಳಸಲು ಮುಂದಾಗಿದೆ. 1977ರಲ್ಲಿ ಶರಾವತಿ ಅಭಯಾರಣ್ಯವನ್ನು ರಚಿಸಿ ಆದೇಶ ಹೊರಡಿಸಲಾಯಿತು. ಆಗ ಅದರ ವ್ಯಾಪ್ತಿಯು 430 ಚ.ಕಿ.ಮೀ. ಆಗಿತ್ತು. ಜೋಗ ಜಲಪಾತದ ನಂತರದ ಶರಾವತಿ ಕಣಿವೆಯು ಯಾವುದೇ ಸಂರಕ್ಷಣೆಗೆ ಒಳಪಟ್ಟಿರಲಿಲ್ಲ. 2019ರಲ್ಲಿ ಅಭಯಾರಣ್ಯದ ವ್ಯಾಪ್ತಿಯನ್ನು 930 ಚ.ಕಿ.ಮೀ. ವಿಸ್ತರಿಸಿ, ಶರಾವತಿ ಸಿಂಗಳೀಕ ಅಭಯಾರಣ್ಯವೆಂದು ಮರುನೇಮಕ ಮಾಡಲಾಯಿತು. ಅತ್ಯಂತ ವಿಶಿಷ್ಟವಾದ, ಪ್ರಾಕೃತಿಕವಾಗಿ ಸೂಕ್ಷ್ಮವಾದ, ಬೆಲೆ ಕಟ್ಟಲಾಗದ ಹಾಗೂ ಅನನ್ಯವಾದ ಈ ಕಣಿವೆ ಪ್ರದೇಶವು ಅತಿಹೆಚ್ಚು ಜೀವಿವೈವಿಧ್ಯ ಹೊಂದಿದೆ. ಸಿಂಗಳೀಕ, ದೊಡ್ಡಮಂಗಟ್ಟೆ ಪಕ್ಷಿ ಸೇರಿದಂತೆ, ಹುಲಿ, ಆನೆ, ಚಿರತೆ, ಕಾಟಿ, ಕರಡಿ, ಕಾಡುಹಂದಿ, ಮುಳ್ಳುಹಂದಿ, ಚಿಪ್ಪುಹಂದಿ, ನರಿ, ಸೀಳುನಾಯಿ, ಕಾನುಕುರಿ ಇತ್ಯಾದಿ ಅಪರೂಪದ ಹಾಗೂ ವನ್ಯಜೀವಿ ಕಾಯ್ದೆಯಡಿ ಅತಿಹೆಚ್ಚು ಭದ್ರತೆ ಒದಗಿಸಲಾದ ಪ್ರಾಣಿ ಪ್ರಭೇದಗಳ ತವರಾಗಿದೆ.

ಖಾಸಗಿ ವ್ಯಕ್ತಿಗಳು ಅಥವಾ ಯಾವುದಾದರೊಂದು ಕಂಪನಿ ವ್ಯವಹಾರ ಪ್ರಾರಂಭಿಸಿದರೆ ಅಲ್ಲಿ ನಿಶ್ಚಿತವಾಗಿ ಲಾಭದ ಲೆಕ್ಕಾಚಾರವಿರುತ್ತದೆ. ಇಷ್ಟು ಬಂಡವಾಳ ಹೂಡಿ, ಇಂತಿಷ್ಟು ಲಾಭ ಪಡೆಯಬಹುದು ಎಂಬುದೇ ಆ ಲೆಕ್ಕಾಚಾರ. ಆದರೆ, ಸರ್ಕಾರವೆನ್ನುವುದು ಲಾಭಕ್ಕಾಗಿ ಹುಟ್ಟಿದ ಕಂಪನಿಯಂತಲ್ಲ. ರಾಜ್ಯದ ಸರ್ವಾಂಗೀಣ ಆರೋಗ್ಯ, ಶಿಕ್ಷಣ, ಮೂಲಭೂತ ಸೌಕರ್ಯಗಳ ಜೊತೆಯಲ್ಲಿ ಶುದ್ಧ ಗಾಳಿ, ನೀರು, ಆಹಾರ ಇತ್ಯಾದಿಗಳು ಸಮಾನವಾಗಿ ಎಲ್ಲರಿಗೂ ಲಭ್ಯವಾಗುವಂತೆ ನೋಡಿಕೊಳ್ಳುವುದು ಸರ್ಕಾರದ ಜವಾಬ್ದಾರಿ. ಸರ್ಕಾರ ರಾಜ್ಯದ ಜನತೆಯ ಹಿತವನ್ನು ಕಾಪಾಡಲು ಮುಂದಾಗಬೇಕೇ ಹೊರತು, ನಾಗರಿಕ ಸಮಾಜಕ್ಕೆ ಹೊರೆಯಾಗಬಾರದು. ಆದರೆ,